## ಪದಬಂಧ




### ಎಡದಿಂದ ಬಲಕ್ಕೆ

| | | |
|---|---|---|
| 1. | ಹಳೆಯ ಕಾಲದ ಯುದ್ಧಗಳಲ್ಲಿ ನೇಗಿಲೂ ಹೀಗೆ ಶಸ್ತ್ರವಾಗಿತ್ತು! | 4 |
| 3. | ನೆಲವನ್ನು ಉತ್ತು ಬಿತ್ತಿದ ಬೇಸಾಯದಿಂದಲೇ ಹತ್ತಿಯದೂ ಹುಟ್ಟು | 3 |
| 4. | ನಿರಾಧಾರವಾದ ಯಾವುದನ್ನೂ ಒಪ್ಪಬಾರದೆಂಬ ತೀರ್ಮಾನ ಆಗಿದೆ | 3 |
| 6. | ಸರ್ಪಕ್ಕೆ ನೀಡಿದರೆ ಏನು ಪ್ರಯೋಜನ ರುಚಿ ರುಚಿಯಾದ ಅಡುಗೆ? | 4 |
| 7. | ಎಲ್ಲರ ಪತನಕ್ಕೆ ಕಾರಣನಾದವ ಪಾಪ ಕಾರ್ಯ ಮಾಡುವ ಈ ವ್ಯಕ್ತಿ | 3 |
| 9. | ಆ ಕಥಾ ನಾಯಕನದು ಸದಾ ಕುದುರೆಯಂತಹ ಕೂಗು | 3 |
| 11. | ವಿತ್ತ ಸಹಿತ ಬಂದವನಿಗೆ ಅಚ್ಚುಮೆಚ್ಚು ಸೂರ್ಯ | 3 |
| 13. | ಮೊಸರು ಮಾರುವ ಕೆಲಸಕ್ಕೂ ಶುಲ್ಕ ನೀಡಬೇಕೇ? | 3 |
| 15. | ಮುದ್ರೆಯೊತ್ತುತ್ತಿದ್ದವನನ್ನು ಆವರಿಸಿದೆ ವೃದ್ಧಾಪ್ಯ | 4 |
| 17. | ನೀರಜ ಅರಳುವ ಸಮಯವೆಂದರೆ ರಾತ್ರಿ ತಾನೇ? | 3 |
| 18. | ಮುರಿದರೇನಂತೆ? ರುಚಿಯಂತೂ ಸಿಹಿಯಾಗಿಯೇ ಇದೆ | 3 |
| 19. | ಸರ್ಪವನ್ನು ಹಿಡಿಯಲು ಹೋದವ ಮಾಡಿದ್ದು ಮದ್ಯ ಸೇವನೆ | 4 |

### ಮೇಲಿನಿಂದ ಕೆಳಕ್ಕೆ

| | | |
|---|---|---|
| 1. | ತರಹೇವಾರಿ ವಸ್ತುಗಳಿವೆ ಅವನ ಬಳಿ | 3 |
| 2. | ಕದನ ನಿಲ್ಲಿಸಲು ನೆರವಾದವನೊಬ್ಬ ಸಿರಿವಂತ | 3 |
| 3. | ಅವಕಾಶ ವಂಚಿತರಿಗೆ ಮತ್ತೊಂದು ಅವಕಾಶ ಪುಕ್ಕಟೆ | 3 |
| 5. | ವೈರತ್ವ ತೋರುವವರನ್ನೆಲ್ಲ ಬೇರೆಲ್ಲಿಗಾದರೂ ಸಾಗಿಸುವುದೇ ಸರಿ | 3 |
| 7. | ಸದುಪಾಯ ತೋರಿದವರಿಗೆ ಊಟದಲ್ಲಿ ಹಬ್ಬದ ಸಿಹಿ ಖಾದ್ಯ | 3 |
| 8. | ಭಾರೀ ತಕರಾರಿಗೆ ಸಿಲುಕಿದ್ದಾನೆ ಬೇಟೆಗಾರ ವ್ಯಕ್ತಿ | 3 |
| 9. | ಸರಕು ಸಾಗಿಸುವ ಹಾದಿಯ ತುಂಬ ಮಣ್ಣು ನೀರು ಮಿಶ್ರಣ | 3 |
| 10. | ಮರೆತು ಎಸೆದ ವಸ್ತು ಭಗ್ನವಾದದ್ದು ತಲೆಕೆಳಗು | 3 |
| 12. | ಕಾರ್ಯವಿಲ್ಲದೆ ಕುಳಿತವನ ಆಲೋಚನೆಗಳದು ಬರೀ ಕೆಟ್ಟ ರೂಪ | 3 |
| 14. | ಸುಸ್ತಾಗಿ ಬಿದ್ದವರ ಸ್ಥಿತಿ ಈಗ ಒಳ್ಳೇ ದೃಢವಾಗಿದೆ | 3 |
| 15. | ಎಲ್ಲರನ್ನೂ ಸುಮ್ಮನಿರಿಸು ಎಂದದ್ದಕ್ಕೆ ಇದೆಂಥ ಕೋಪ? | 3 |
| 16. | ಆತನ ಮನಸಿನ ಔದಾರ್ಯಕ್ಕೆ ಗೌರವದ ವಂದನೆ | 3 |

## 10–11–2022 ಉತ್ತರಗಳು

### ಎಡದಿಂದ ಬಲಕ್ಕೆ

1. ಅನಾಮಿಕ 3. ಸಂಕಷ್ಟ 7. ಮೂಗುಮುರಿ 8. ಬಲ್ಲವ 9. ದುಗ (=ಎರಡು) 12. ಕೆರ 14. ವರದಿ 15. ಜಟಾಪಟಿ17. ಶರಧಿ 18. ಬಲವಂತ

### ಮೇಲಿನಿಂದ ಕೆಳಕ್ಕೆ

1. ಅಷ್ಟ 2. ಮಿನುಗು 4. ಕನವರ 5. ಬರಿದು 6. ಕಬಳಿಕೆ 10. ಗತದಿನ 11. ಸಂವತ್ಸರ 13. ರಜನಿ 16. ಪಟಲ 17. ಶತ

**ಪ್ರಶ್ನಾಂಕಣ**

## ಪೆಂಗ್ವಿನ್ ಅಂಚೆ ಕಚೇರಿ: ಏನು ವಿಶೇಷ?

ಪೃಥ್ವಿಯ ಶಾಶ್ವತ ಹಿಮಲೋಕವಾದ ಅಂಟಾರ್ಕ್ಟಿಕಾ ಭೂಖಂಡದಲ್ಲಿರುವುದೇ (ಚಿತ್ರ 1, 2 ನೋಡಿ) ಪೆಂಗ್ವಿನ್ ಅಂಚೆ ಕಚೇರಿಯ ಪ್ರಥಮ ವಿಶೇಷ. ಪೆಂಗ್ವಿನ್ ಹಕ್ಕಿಗಳ (ಚಿತ್ರ 3) ಕೆಲವು ಪ್ರಭೇದಗಳು, ಎಂದರೆ ಎಂಪರರ್ ಪೆಂಗ್ವಿನ್, ಕಿಂಗ್ ಪೆಂಗ್ವಿನ್, ಜೆಂಟೂ ಪೆಂಗ್ವಿನ್ ಇತ್ಯಾದಿ ಪ್ರಭೇದಗಳ, ಸಂತಾನಾಭಿವರ್ಧನೆಯ ನೆಲೆಯಾದ ಅಂಟಾರ್ಕ್ಟಿಕಾದಲ್ಲಿರುವ ಈ ಅಂಚೆ ಕಚೇರಿಗೆ ಈ ಕಾರಣದಿಂದಾಗಿಯೇ 'ಪೆಂಗ್ವಿನ್ ಅಂಚೆ ಕಚೇರಿ' (ಪೆಂಗ್ವಿನ್ ಪೋಸ್ಟ್ ಆಫೀಸ್) ಎಂಬ ಅಭಿಧಾನ. ಅಸಹನೀಯ ಚಳಿಯ, ಹೆಪ್ಪುಗಟ್ಟಿದ ನೆಲದ, ಅನ್ಯಲೋಕ ಸದೃಶ ಪರಿಸರದ ಅಂಟಾರ್ಕ್ಟಿಕಾದಲ್ಲಿರುವ ಈ ಅಂಚೆ ಕಚೇರಿಯ ಇತರ ಪ್ರಮುಖ ವೈಶಿಷ್ಟ್ಯಗಳು:

- ಅಂಟಾರ್ಕ್ಟಿಕಾದ ವಾಯವ್ಯದಂಚಿನ ಸನಿಹದ ಒಂದು ಬಹು ಪುಟ್ಟ ಗೋಡಿಯರ್ ದ್ವೀಪದ ಲಾಕ್ ರಾಯ್ ಬಂದರು ಪ್ರದೇಶದಲ್ಲಿ ಈ ಅಂಚೆ ಕಚೇರಿ ನೆಲೆಗೊಂಡಿದೆ; 1996 ರಿಂದ ಕಾರ್ಯ ನಿರ್ವಹಿಸುತ್ತಿದೆ. ಬ್ರಿಟಿಷರು ಸ್ಥಾಪಿಸಿ ನಿರ್ವಹಿಸುತ್ತಿರುವ ಈ ಅಂಚೆ ಕಚೇರಿಯಲ್ಲಿ ಅದರ ಜೊತೆಗೆ ಒಂದು ವಸ್ತು ಸಂಗ್ರಹಾಲಯ ಮತ್ತು ಒಂದು ಗಿಫ್ಟ್ ಶಾಪ್ ಕೂಡ ಇವೆ.
- ಅಂಟಾರ್ಕ್ಟಿಕಾದ 'ಬೇಸಿಗೆ'ಯಲ್ಲಿ ಮಾತ್ರ ಈ ಅಂಚೆ ಕಚೇರಿ ಕೆಲಸ ಮಾಡುತ್ತದೆ. ಪ್ರತಿ ವರ್ಷದ ನವೆಂಬರ್‌ನಿಂದ ಮುಂದಿನ ಮಾರ್ಚ್ ವರೆಗಿನ ಈ ಐದು ತಿಂಗಳ ಅವಧಿಯಲ್ಲಿ ಅಂಟಾರ್ಕ್ಟಿಕಾದಲ್ಲಿ ಇರುಳೇ ಬಾರದೆ ಸೂರ್ಯನ ಮಂದ ಬೆಳಕು ನಿರಂತರ ಇರುತ್ತದೆ. ಇದೇ ಅವಧಿಯಲ್ಲಿ ಗೋಡಿಯರ್ ದ್ವೀಪಕ್ಕೆ ಸಾವಿರಾರು 'ಜೆಂಟೂ ಪೆಂಗ್ವಿನ್'ಗಳು ಸಂತಾನವರ್ಧನೆಗೆಂದು ಬಂದು ಉಳಿದಿರುತ್ತವೆ. ಜೊತೆಗೆ ಸರಾಸರಿ 18,000 ಪ್ರವಾಸಿಗರು ಭೇಟಿ ನೀಡುತ್ತಾರೆ. ಅವರಿಗಾಗಿಯೇ ಈ ಅಂಚೆ ಕಚೇರಿ. ಇಲ್ಲಿಂದ ಪ್ರತಿ ಅವಧಿಯಲ್ಲೂ ಕನಿಷ್ಠ 80,000 ಪತ್ರಗಳು ರವಾನೆಗೊಳ್ಳುತ್ತವೆ.
- ಈ ಪ್ರದೇಶದಲ್ಲಿ ಕೊಳಾಯಿಗಳಿಲ್ಲ; ನೇರ ಬಳಸಲು ದ್ರವ ರೂಪದ ನೀರು ದೊರಕುವುದಿಲ್ಲ. ಇಲ್ಲಿ ಸಾರ್ವಜನಿಕ ಫೋನ್ ಸಂಪರ್ಕ ಇಲ್ಲ; ವೈಫೈ ಲಭ್ಯವಿಲ್ಲ! ಒಟ್ಟಾರೆ ಹಿತಕರ ಬದುಕಿನ ಯಾವುದೇ ಸೌಲಭ್ಯ ಇಲ್ಲ. ಸದಾ ಮೈಮರಗಟ್ಟಿಸುವ ಚಳಿಯ ದುರ್ಭರ ಪರಿಸರ.




- ಪೆಂಗ್ವಿನ್ ಅಂಚೆ ಕಚೇರಿಯ ಒಟ್ಟು ಸಿಬ್ಬಂದಿ ಸಂಖ್ಯೆ ಕೇವಲ ನಾಲ್ಕು. ಒಬ್ಬರು ಪೋಸ್ಟ್ ಮಾಸ್ಟರ್; ಗಿಫ್ಟ್ ಶಾಪ್ ನಿರ್ವಹಣೆಗೆ ಇನ್ನೊಬ್ಬರು; ಅಲ್ಲಿಗೆ ಬರುವ ಪೆಂಗ್ವಿನ್‌ಗಳ ಸಂರಕ್ಷಣೆಗೆ ಮತ್ತೊಬ್ಬರು; ಎಲ್ಲ ಕೆಲಸಗಳ ಉಸ್ತುವಾರಿಗೆ ಒಬ್ಬರು. ಪ್ರತಿ ಬಾರಿಯೂ ಹೊಸ ಸಿಬ್ಬಂದಿಯ ಆಯ್ಕೆ, ತರಬೇತಿ ಮತ್ತು ನಿಯೋಜನೆ. ಈ ಬಾರಿ ಹೊರಟಿರುವ ನಾಲ್ಕೂ ಜನ ಮಹಿಳೆಯರೇ ಆಗಿರುವುದು ಮತ್ತೊಂದು ವಿಶೇಷ.

**■ ಎನ್. ವಾಸುದೇವ್**